ಹರಿದ್ವರ್ಣಾಳಿಗೆ ಹದಿನೈದು ದಿನಗಳಿಂದ ಬೆನ್ನು ನೋವು ಕಾಡುತ್ತಿತ್ತು. ವಿಪರೀತಕ್ಕೆ ಹೋಗುತ್ತಿದೆ ಎನ್ನಿಸಿದಾಗ ಆಫೀಸಿನಿಂದ ಬಂದವಳೇ ಬಿಸಿನೀರು ಹುಯ್ದುಕೊಂಡು ನೋವಿದ್ದಲ್ಲಿ ಸ್ಪ್ರೇ ಹಾಕಿಕೊಂಡು ಮೆತ್ತನೆಯ ಸಡಿಲಾದ ಹಳೆಯ ಟೀಶರ್ಟ್ ಮತ್ತು ಕೆಳಗೊಂದು ಮೊಂಡುಚಡ್ಡಿ ಹಾಕಿಕೊಂಡು ಮಲಗಿಬಿಟ್ಟಿದ್ದಳು. ಎರಡು ತಾಸು ಒದ್ದಾಡಿದ ಮೇಲೆ ಅದ್ವೇಗೋ ನೋವು ಕಡಿಮೆಯಾಗಿ ನಿದ್ದೆಹತ್ತಿತ್ತು. ರಾತ್ರಿ ಅದ್ಯಾವಾಗ ಅವಳ ಗಂಡ ಬಂದನೋ, ಉಂಡನೋ, ಮಲಗಿದನೋ ಏನೊಂದೂ ಗೊತ್ತೇ ಆಗಿರಲಿಲ್ಲ. ಬೆಳಗಾಗುತ್ತಿದ್ದಂತೆ ನೋವು ಮತ್ತೆ ಶುರುವಾದಾಗ ಆಫೀಸಿಗೆ ರಜೆ ಹಾಕಿಬಿಟ್ಟಳು. ಹತ್ತರ ಸುಮಾರಿಗೆ ಒಂದು ಫೋನೂ ಇಲ್ಲದೆ ಗಂಡನ ಸಂಬಂಧಿಕರು ಯಾವುದೋ ಕಾರ್ಯಕ್ರಮಕ್ಕೆ ಆಮಂತ್ರಿಸಲೆಂದು ಇದ್ದಕ್ಕಿದ್ದ ಹಾಗೆ ಬಂದುಬಿಟ್ಟಿದ್ದರು.



